ಶಿವಮೊಗ್ಗ, ದಾವಣಗೆರೆ ಮತ್ತು ಚಿತ್ರದುರ್ಗ ಜಿಲ್ಲಾ ಸಹಕಾರ ಹಾಲು ಉತ್ಪಾದಕರ ಸಂಘಗಳ ಒಕ್ಕೂಟ ನಿ.,
ಮಾಚೇನಹಳ್ಳಿ, ನಿದಿಗೆ(ಅಂಚೆ), ಶಿವಮೊಗ್ಗ-577 222
ದೂರವಾಣಿ: 08182-246161, 246162
E-mail: md_shimul@yahoo.com, shimuladmn@gmail.com Website: www.shimul.coop

ಸಂಖ್ಯೆ.ಶಿಮುಲ್/ಆಡಳಿತ-1/ನೇ.ನೇ-370/1612/2026-27 ದಿನಾಂಕ: 12-06-2026

## ಪರಿಷ್ಕೃತ ನೇಮಕಾತಿ ಪ್ರಕಟಣೆ

ಶಿವಮೊಗ್ಗ, ದಾವಣಗೆರೆ ಮತ್ತು ಚಿತ್ರದುರ್ಗ ಜಿಲ್ಲಾ ಸಹಕಾರ ಹಾಲು ಉತ್ಪಾದಕರ ಸಂಘಗಳ ಒಕ್ಕೂಟ ನಿ., (ಶಿಮುಲ್) ಶಿವಮೊಗ್ಗ ಇದರಲ್ಲಿ ಖಾಲಿ ಇರುವ ವಿವಿಧ ವೃಂದಗಳಲ್ಲಿನ ಒಟ್ಟು 194 ಹುದ್ದೆಗಳ ನೇಮಕಾತಿಗಾಗಿ ಅರ್ಜಿ ಆಹ್ವಾನಿಸಿ ಹೊರಡಿಸಲಾಗಿರುವ ನೇಮಕಾತಿ ಪ್ರಕಟಣೆ ಸಂಖ್ಯೆ.ಶಿಮುಲ್/ಆಡಳಿತ-1/ನೇ.ನೇ-370/4438/2025-26 ದಿನಾಂಕ: 14.11.2025 ಮತ್ತು ಕಾಲಾವಧಿ ವಿಸ್ತರಣೆ ಸಂಖ್ಯೆ.ಶಿಮುಲ್/ಆಡಳಿತ-1/ನೇ.ನೇ-370/6198/2025-26 ದಿನಾಂಕ: 05.02.2026 ಗಳನ್ನು ಸರ್ಕಾರದ ಆದೇಶ ದಿನಾಂಕ: 27.04.2026 ಮತ್ತು 08.05.2026 ರನ್ವಯ ಹಿಂಪಡೆದು ಈ ಕೆಳಕಂಡಂತೆ ಪರಿಷ್ಕೃತ ನೇಮಕಾತಿ ಪ್ರಕಟಣೆ ಹೊರಡಿಸಲಾಗಿದೆ.

ಜಾರಿಯಲ್ಲಿರುವ ಸರ್ಕಾರದ ಆದೇಶದನ್ವಯ ರೋಸ್ಟರ್ ಬಿಂದು ಮತ್ತು ಒಳ ಮೀಸಲಾತಿಯನ್ನು ಅಳವಡಿಸಿಕೊಂಡು ಒಕ್ಕೂಟದಲ್ಲಿ ಖಾಲಿ ಇರುವ ಈ ಕೆಳಕಂಡ ವಿವಿಧ ವೃಂದಗಳಲ್ಲಿನ ಒಟ್ಟು 194 ಹುದ್ದೆಗಳಿಗೆ ಅರ್ಹ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಆನ್‌ಲೈನ್ ಮುಖಾಂತರ ಆಹ್ವಾನಿಸಲಾಗಿದೆ.

ಕರ್ನಾಟಕ ಸರ್ಕಾರದ ಆದೇಶ ಸಂಖ್ಯೆ. ಸಿಇ 147 ಸಿಸಿಬಿ 2022 ಬೆಂಗಳೂರು ದಿನಾಂಕ: 12.10.2022 ರಲ್ಲಿ ಅನುಮೋದಿಸಿದಂತೆ ನೇಮಕಾತಿಗೆ ಸಂಬಂಧಿಸಿದ ಮೀಸಲಾತಿ ವರ್ಗೀಕರಣ, ಒಳ ಮೀಸಲಾತಿ, ವಿದ್ಯಾರ್ಹತೆ ಮತ್ತು ಅನುಭವ, ವಯೋಮಿತಿ, ಅರ್ಜಿ ಶುಲ್ಕ, ಆಯ್ಕೆ ವಿಧಾನ, ಅರ್ಜಿ ನಮೂನೆ, ಸಲ್ಲಿಸಬೇಕಾದ ದಾಖಲೆಗಳು ಮತ್ತು ಅರ್ಜಿ ಸಲ್ಲಿಸುವ ವಿಧಾನ ಇತ್ಯಾದಿ ಹೆಚ್ಚಿನ ಎಲ್ಲಾ ವಿವರಗಳನ್ನು ಒಕ್ಕೂಟದ ಅಧಿಕೃತ ವೆಬ್‌ಸೈಟ್ **www.shimul.coop** ರಲ್ಲಿ ನೀಡಲಾಗಿದೆ. ಹುದ್ದೆಗಳ ವಿವರ ಈ ಕೆಳಕಂಡಂತಿರುತ್ತದೆ.

| ಕ್ರ. ಸಂ | ಭರ್ತಿ ಮಾಡಲಿರುವ ಹುದ್ದೆಗಳ ವಿವರ | ವೇತನ ಶ್ರೇಣಿ (ರೂ. ಗಳಲ್ಲಿ) | ಹುದ್ದೆಗಳ ಸಂಖ್ಯೆ |
|---|---|---|---|
| 1 | ಸಹಾಯಕ ವ್ಯವಸ್ಥಾಪಕರು(ಎಹೆಚ್/ಎಐ) | 83700-155200 | 17 |
| 2 | ಸಹಾಯಕ ವ್ಯವಸ್ಥಾಪಕರು(ಆಡಳಿತ) | 83700-155200 | 01 |
| 3 | ಸಹಾಯಕ ವ್ಯವಸ್ಥಾಪಕರು(ಎಫ್ ಅಂಡ್ ಎಫ್) | 83700-155200 | 03 |
| 4 | ಎಂಐಎಸ್ / ಸಿಸ್ಟಂ ಆಫೀಸರ್ | 69250-134200 | 01 |
| 5 | ಮಾರುಕಟ್ಟೆ ಅಧಿಕಾರಿ | 69250-134200 | 02 |
| 6 | ತಾಂತ್ರಿಕ ಅಧಿಕಾರಿ(ಅಭಿಯಂತರ) | 69250-134200 | 02 |
| 7 | ತಾಂತ್ರಿಕ ಅಧಿಕಾರಿ(ಗುಣನಿಯಂತ್ರಣ) | 69250-134200 | 02 |
| 8 | ತಾಂತ್ರಿಕ ಅಧಿಕಾರಿ(ಡಿಟಿ) | 69250-134200 | 14 |
| 9 | ಕೆಮಿಸ್ಟ್ ದರ್ಜೆ-1 | 54175-99400 | 04 |
| 10 | ವಿಸ್ತರಣಾಧಿಕಾರಿ ದರ್ಜೆ-3 | 54175-99400 | 17 |
| 11 | ಆಡಳಿತ ಸಹಾಯಕ ದರ್ಜೆ-2 | 44425-83700 | 17 |
| 12 | ಲೆಕ್ಕ ಸಹಾಯಕ ದರ್ಜೆ-2 | 44425-83700 | 12 |
| 13 | ಮಾರುಕಟ್ಟೆ ಸಹಾಯಕ ದರ್ಜೆ-2 | 44425-83700 | 10 |
| 14 | ಕೆಮಿಸ್ಟ್ ದರ್ಜೆ-2 | 44425-83700 | 28 |
| 15 | ಕಿರಿಯ ಸಿಸ್ಟಂ ಆಪರೇಟರ್ | 44425-83700 | 13 |
| 16 | ಶೀಘ್ರಲಿಪಿಗಾರರು ದರ್ಜೆ-2 | 44425-83700 | 01 |
| 17 | ಕಿರಿಯ ತಾಂತ್ರಿಕರು | 34100-67600 | 50 |
| | ಒಟ್ಟು ಹುದ್ದೆಗಳ ಸಂಖ್ಯೆ | | 194 |

ಆನ್‌ಲೈನ್ ಮುಖಾಂತರ ದಿನಾಂಕ: 14.06.2026 ರಿಂದ 14.07.2026 ರವರೆಗೆ ಅರ್ಜಿ ಸಲ್ಲಿಸಬಹುದಾಗಿರುತ್ತದೆ. ಈ ಕುರಿತು ಹೆಚ್ಚಿನ ಮಾಹಿತಿಗಳು ಶಿಮುಲ್ ವೆಬ್‌ಸೈಟ್ **www.shimul.coop** ರಲ್ಲಿ ಲಭ್ಯವಿದ್ದು, ಆಸಕ್ತಿಯುಳ್ಳ ಅಭ್ಯರ್ಥಿಗಳು ಒಕ್ಕೂಟದ ವೆಬ್‌ಸೈಟ್‌ಗೆ ಭೇಟಿ ನೀಡಿ ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸತಕ್ಕದ್ದು ಹಾಗೂ ನಿಗದಿತ ಅರ್ಜಿ ಶುಲ್ಕವನ್ನು ಆನ್‌ಲೈನ್ ಮುಖಾಂತರವೇ ಪಾವತಿಸತಕ್ಕದ್ದು.

ಈಗಾಗಲೇ ದಿನಾಂಕ: 14.11.2025 ಮತ್ತು 05.02.2026 ರ ಪ್ರಕಟಣೆಗಳಡಿಯಲ್ಲಿ ಪಾವತಿಸಿರುವ ಎಲ್ಲಾ ಅಭ್ಯರ್ಥಿಗಳ ಅರ್ಜಿ ಶುಲ್ಕವನ್ನು (ಬ್ಯಾಂಕ್ ಶುಲ್ಕ ಹೊರತುಪಡಿಸಿ) ಪಾವತಿಸಲು ಬಳಸಿದ ಬ್ಯಾಂಕ್ ಖಾತೆಗಳಿಗೆ ಹಿಂದಿರುಗಿಸಲಾಗುವುದು. ಸದರಿ ನೇಮಕಾತಿಗಾಗಿ ಅಭ್ಯರ್ಥಿಗಳು ತಮ್ಮ ಅರ್ಜಿಗಳನ್ನು ಖುದ್ದಾಗಿ/ಅಂಚೆ/ಕೋರಿಯರ್ ಮೂಲಕ ಸಲ್ಲಿಸಲು ಅವಕಾಶವಿಲ್ಲವೆಂದು ಈ ಮೂಲಕ ಸ್ಪಷ್ಟಪಡಿಸಿದೆ.

ವ್ಯವಸ್ಥಾಪಕ ನಿರ್ದೇಶಕರು